ಸರ್ಕಾರವು ಇದರ ಬಗ್ಗೆ ವಿಶೇಷ ಗಮನವನ್ನು ಹರಿಸಿ ಈ ಕಾರ್ಯದ ಬಗ್ಗೆ ಟೆಂಡರುಗಳನ್ನು ಕರೆದು ಈ ಕೆಲಸದ ಮೌಲ್ಯ ಮಾಪನಕ್ಕಾಗಿ ರಚಿಸಲ್ಪಟ್ಟ ಸಮಿತಿಯ ಅಭಿಪ್ರಾಯದಂತೆ ಈ ಕೆಲಸವನ್ನು ಸುಮಾರು ೧೨ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈಗಾಗಲೇ ಮೆಸರ್ಸ್ ಬೋಸ್ ಡ್ರೆಜಿಂಗ್ ಸರ್ವಿಸಸ್ ಲಿಮಿಟೆಡ್ (ಖಾಸಗಿ ಸಂಸ್ಥೆ) ಇವರಿಗೆ ಒಪ್ಪಿಸಿದೆ. ಈ ಬಗ್ಗೆ ಕರಾರು ಪತ್ರಗಳು ಪೂರ್ಣಗೊಂಡಿದ್ದು ಮೊಬಲೈಜೇಷನ್ ಅಡ್ವಾನ್ಸ್‌ಗಾಗಿ ೩ ಲಕ್ಷ ರೂಪಾಯಿಗಳನ್ನು ಪಾವತಿ ಮಾಡಲಾಗಿದೆ. ಇದೇ ಕಂಪನಿಗೆ ಮಂಗಳೂರು ಮೀನುಗಾರಿಕೆ ವಾರ್ಫ್‌ನಲ್ಲಿ ಹೂಳೆತ್ತುವ ಕೆಲಸವನ್ನೂ ಸಹ ಸುಮಾರು ೬ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪಹಿಸಲಾಗಿದೆ. ಇವರು ಯಂತ್ರಗಳನ್ನು ತಂದು ಜೋಡಿಸುತ್ತಾ ಇದ್ದಾರೆ. ಮತ್ತು ಮೀನುಗಾರಿಕೆ ವಾರ್ಫ್‌ಗೆ ಸಂಬಂಧಿಸಿದ ಹೂಳೆತ್ತುವ ಕಾರ್ಯವನ್ನು ಸಧ್ಯದಲ್ಲೇ ಆರಂಭಿಸಲಾಗುತ್ತದೆ. ಇನ್ನು ೧೦-೧೫ ದಿವಸಗಳಲ್ಲಿ ಆ ಕೆಲಸ ಪ್ರಾರಂಭವಾಗಬಹುದು.

ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ಹೂಳೆತ್ತುವ ವಿಷಯಕ್ಕೆ ಸಂಬಂಧಿಸಿದಂತೆ, ಈ ಕೆಲಸವನ್ನು ಈಗಾಗಲೇ ಮೆಸರ್ಸ್ ಆಂಧ್ರ ಸಿವಿಲ್ ಕನ್‌ಸ್ಟ್ರಕ್ಷನ್ಸ್ ಕಂಪನಿ, ಮದ್ರಾಸ್ ಇವರಿಗೆ ಸುಮಾರು ೬ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವಹಿಸಲಾಗಿದ್ದು ಇವರಿಗೆ ೬ ಲಕ್ಷ ರೂಪಾಯಿಗಳನ್ನು ಮೊಬಿಲೈಜೇಷನ್ ಅಡ್ವಾನ್ಸ್ ಆಗಿ ಪಾವತಿ ಮಾಡಲಾಗಿದೆ, ಇವರೂ ಸಹ ಹೂಳೆತ್ತುವ ಕೆಲಸಕ್ಕಾಗಿ ಯಂತ್ರಗಳನ್ನು ಜೋಡಿಸುತ್ತಾ ಇದ್ದಾರೆ, ಸಧ್ಯದಲ್ಲೇ ಹೂಳೆತ್ತುವ ಕಾರ್ಯವನ್ನು ಪ್ರಾರಂಭಿಸಲಾಗುವುದು.

೧೦ ಪಿ. ಎಂ.

5. ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರ ವೇತನವನ್ನು ಹೆಚ್ಚಿಸುವುದಂ ಮತ್ತು ಅವರನ್ನು ಖಾಯಂಗೊಳಿಸಲಾಗುವುದು

ಶ್ರೀ ಜಿ. ಎಸ್. ಆಚಾರ್ (ಬೈಂದೂರು)— ಅಧ್ಯಕ್ಷರೇ, ಭಾವೀ ಜನಾಂಗದ ಭವಿಷ್ಯತ್ತನ್ನು ರೂಪಿಸುವ ಪವಿತ್ರ ಕಾರ್ಯದ ರೂವಾರಿಗಳೆಂದು ಶಿಕ್ಷಕರನ್ನು ಹೊಗಳುವುದಂ ಮಾತ್ರ ನಿರಂತರವಾಗಿ ನಡೆದಿದೆಯೇ ಹೊರತು, ಖಾಲಿ ಬಿದ್ದ ಶಿಕ್ಷಕರ ಸ್ಥಾನಗಳನ್ನು ತುಂಬಿಸಲು ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಗುತ್ತಿಗೆ ಶಿಕ್ಷಕರು, ಅಲ್ಪಕಾಲಿಕ ಶಿಕ್ಷಕರನ್ನು ನೇಮಿಸಿಕೊಂಡು ದುಡಿಮೆಗೆ ತಕ್ಕ ವೇತನ ನೀಡದೆ, ಶಿಕ್ಷಕ ವೃತ್ತಿಗೇ ಅನ್ಯಾಯವೆಸಗುತ್ತಿರುವುದು ಸರಿಯಲ್ಲ. ಆದರಲ್ಲೂ ಬುನಾದಿಯಲ್ಲೇ ಮಕ್ಕಳ ಭವಿಷ್ಯ ರೂಪಿಸುವ ಪ್ರಾಥಮಿಕ ಶಾಲಾ ಶಿಕ್ಷಕರ ಬವಣೆ–ಕಡಿಮೆಜನಕವಾದುದು. ಗುತ್ತಿಗೆ ಆಧಾರದಲ್ಲಿ ನೇಮಿಸಲ್ಪಟ್ಟ ಪದವಿ ಕಾಲೇಜು, ಪದವಿ ಪೂರ್ವ ಕಾಲೇಜು, ಪ್ರೌಢ ಶಾಲಾ ಶಿಕ್ಷಕರಿಗೆ ಪರಿಷ್ಕೃತ ವೇತನ, ವೇತನ ಬಾಕಿ ಮಂಜೂರಾಗಿದ್ದರೆ, ಈ ಸವಲತ್ತು ಸಹ ಪ್ರಾಥಮಿಕ ಶಾಲಾ ಗುತ್ತಿಗೆ ಶಿಕ್ಷಕರಿಗಿಲ್ಲ. ಈ ದುಬಾರಿ ದಿನಗಳಲ್ಲೂ ಅವರ ಪಾಲಿಗೆ ತಿಂಗಳಿಗೆ ರೂ ೫೪೦ ಮಾತ್ರ ಲಭ್ಯ, ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಖಾಯಂಗೊಳಿಸಬೇಕು. ಅದಕ್ಕೆ ಸಮಯಾವಕಾಶ ಬೇಕಿದ್ದಲ್ಲಿ ಆತನಕ ವೇತನವನ್ನಾದರೂ ಪರಿಷ್ಕರಿಸಬೇಕು. ವಿದ್ಯಾರ್ಥಿ ಅಧ್ಯಾಪಕ ನಿವೃತ್ತಿಗನುಗುಣವಾಗಿ ಶಿಕ್ಷಕರನ್ನು ನೇಮಿಸಬೇಕು ಎಂದು ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಎಂ, ರಘುಪತಿ. —ಅಧ್ಯಕ್ಷರೇ ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ,

6. ಸ್ವಾತಂತ್ರ್ಯೋತ್ಸವ ಮುಂತಾದ ರಾಷ್ಟ್ರೀಯ ಸಮಾರಂಭಗಳಲ್ಲಿ ಧ್ವಜಾರೋಹಣ ಮಾಡುವ ಅಪಕಾಶವನ್ನು ಶಾಸಕರಿಗೆ ಕಲ್ಪಿಸುವುದು

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ) — ರಾಷ್ಟ್ರಾದ್ಯಂತ ಆಚರಿಸಲಾಗುತ್ತಿರುವ ಸ್ವಾತಂತ್ರ್ಯೋತ್ಸಹವ ಮೊದಲಾದ ರಾಷ್ಟ್ರೀಯ ಸಮಾರಂಭಗಳಲ್ಲಿ ರಾಷ್ಟ್ರಧ್ವಜಾರೋಹಣ ಮಾಡುವ ಗೌರವಯುತ ಅವಕಾಶವನ್ನು ತಾಲ್ಲೂಕು ಮತ್ತು ಜಿಲ್ಲಾಮಟ್ಟಗಳಲ್ಲಿ ಸರಕಾರಿ ನೌಕರರುಗಳಾದ ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳು ನಿರ್ವಹಿಸುತ್ತಿದ್ದು ಇಂತಹ ಸಂಮಾರಂಭಗಳಲ್ಲಿ ರಾಷ್ಟ್ರದ ಸಾರ್ವಭೌಮರಾದ ಜನತೆಯಿಂದ ಆಯ್ಕೆಯಾದ ಜನತಾ ಪ್ರತಿನಿಧಿಗಳಾದ ಲೋಕಸಭಾ ಮತ್ತು ಶಾಸನಸಭಾ ಸದಸ್ಯರುಗಳು ಇಂತಹ ಸಮಾರಂಭಗಳಲ್ಲಿ ಮೂಕ ಪ್ರೇಕ್ಷಕರಂತೆ ಭಾಗವಹಿಸಬೇಕಾಗಿತ್ತು

ಇದು ಶಾಸಕರುಗಳಿಗೆ ಅವಮಾನವಲ್ಲವೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ಮಾಡಿದ ಅವಮಾನ ವೆಂದು ಈ ಪದ್ಧತಿಯನ್ನು ತಪ್ಪಿಸಿ ರಾಜ್ಯದಲ್ಲಿ ಲೋಕಸಭಾ ಮತ್ತು ಶಾಸನಸಭಾ ಸದಸ್ಯರುಗಳು ಆಯಾಯ ಕ್ಷೇತ್ರಗಳಲ್ಲಿ ಇಂತಹ ಸಮಾರಂಭಗಳಲ್ಲಿ ರಾಷ್ಟ್ರಧ್ವಜ ಆರೋಹಣ ಮಾಡುವ ಅವಕಾಶವನ್ನು ಶಾಸಕರು ಮತ್ತು ಲೋಕಸಭಾ ಸದಸ್ಯರುಗಳಿಗೆ ಕೊಟ್ಟು ಪ್ರಜಾಪ್ರಭುತ್ವ ಪದ್ಧತಿಗೆ ಬೆಲೆ ಬರುವಂತೆ ಕ್ರಮ ಕೈಗೊಳ್ಳಬೇಕೆಂದು ಶಾಸಕನಾದ ನಾನು ೨೦-೮-೧೯೮೬ರಂದು ಸಿಖಿಳನೇ ನಿಯಮದ ಕೆಳಗೆ ಈ ಸದನದಲ್ಲಿ ಸರಕಾರವನ್ನು ಒತ್ತಾಯಿಸಿದ್ದೆ. ಆದರೂ ಸಹ ಈ ವರೆಗೆ ಈ ಬಗ್ಗೆ ಯಾವುದೇ ಬದಲಾವಣೆಯಾಗಿಲ್ಲ. ಇಂದಿನವರೆಗೆ ಸರಕಾರಿ ಅಧಿಕಾರಿಗಳು ಈ ಅವಕಾಶವನ್ನು ಅನುಭವಿಸುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಶಾಹಿ ಮನೋಭಾವವನ್ನು ಜನ ಸಹಿಸಲಾರರು. ಇದು ಪರೋಕ್ಷವಾಗಿ ಜನತೆಗೆ ಮಾಡಿದ ಅವಮಾನವಾಗಿರುತ್ತದೆ. ತಕ್ಷಣ ಈ ಪದ್ಧತಿಯನ್ನು ಬದಲಾಯಿಸ ಬೇಕೆಂದೂ ಹಾಗೂ ಈ ಬಗ್ಗೆ ಶಾಸಕರು ಮತ್ತು ಜನತೆಗೆ ಬರವಸೆ ಕೊಡಬೇಕೆಂದು ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.— ಅಧ್ಯಕ್ಷರೇ, ರಾಷ್ಟ್ರದ ಧ್ವಜವನ್ನು ಆರೋಹಣ ಮಾಡುವ ಬಗ್ಗೆ ಪಾಲಿಸಬೇಕಾದ ನಿಯಮಗಳನ್ನು ಭಾರತ ಸರ್ಕಾರವು ರೂಪಿಸಿದೆ ಮತ್ತು ಅದನ್ನು ಭಾರತ ಸರ್ಕಾರದ ಒಳಾಡಳಿತ ಸಚಿವಾಲಯದಲ್ಲಿ ಹೊರಡಿಸಿರುವ ಭಾರತದ ಫ್ಲ್ಯಾಗ್ ಕೊಡ್‌ನಲ್ಲಿ ಸೇರಿಸಲಾಗಿದೆ. ಪರಂಪರೆಯಂತೆ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ ಸಮಾರಂಭಗಳಲ್ಲಿ ಹಿರಿಯ ಸರ್ಕಾರಿ ಪ್ರತಿನಿಧಿಗಳು ಅಂದರೆ ರಾಜ್ಯಪಾಲರು, ಮುಖ್ಯಮಂತ್ರಿಗಳು, ಸಂಪುಟದ ಸಚಿವರು, ಆಯುಕ್ತರುಗಳು, ಜಿಲ್ಲಾಧಿಕಾರಿಗಳು ವಂದನೆಗಳನ್ನು ಸ್ವೀಕರಿಸುವಂತೆ ಭಾರತ ಸರ್ಕಾರವು ತಿಳುವಳಿಕೆ ನೀಡಿದೆ. ಆದುದರಿಂದ ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರುಗಳು ಹಿರಿಯ ಪ್ರತಿನಿಧಿಗಳಾದುದರಿಂದ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆ ಸಮಾರಂಭಗಳಲ್ಲಿ ಅವರು ರಾಷ್ಟ್ರಧ್ವಜ ಆರೋಹಣ ಮಾಡಿ ವಂದನೆಯನ್ನು ಸ್ವೀಕರಿಸಬಹುದಾಗಿದೆ.

ಈ ಪದ್ಧತಿಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಬೇಕಾದರೂ ಕೂಡ ಅದನ್ನು ಕೇಂದ್ರ ಸರ್ಕಾರದವರೆ ಮಾಡಬೇಕಾಗಿದೆ.

7. Drinking water Problem in Hubli-Dharwar City

SRI A.M. HINDUSGERI (Hubli).—The people of Hubli-Dharwad are facing severe drinking water problems for quite a long time. I wanted to know from the Hon'ble Minister of Urban Development how much money that has been sanctioned for the Malaprabha Water Supply Scheme, II Stage and when this project would be taken up for implementation ?

SRI M. RAGHUPATHY (Minister for Ports and Fisheries).—On behalf of the Minister for Urban Development I may be permitted to make the following statement.—

"The population of Hubli Dharwad City as per 1981 Census is 5,26,000 and the present population is estimated to be 6,50,000.

The water supply to Hubli Dharwad City is from two sources.—

1. From Neerasagara lake to an extent of 9.00 MGD

2. From Malaprabha Water Supply Scheme Its stage to an extent of 7.50MGD and(3)from Borewells.

The rate of Water supply worked out to about 25 GPCD.